# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ನಿರ್ಮಾಣ ಭವನ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010

www.souharda.coop, Ph: 080-23378375-80, E-mail: souharda@souharda.coop

ಸಂ:ಸಂಸ/ಆಡಳಿತ/ಚುನಾವಣೆ/23/2016–17 ದಿನಾಂಕ:08.10.2016

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ,

**ಮಾನ್ಯರೇ,**

**ವಿಷಯ : ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಚುನಾವಣೆಗೆ ಮಾನ್ಯ ಚುನಾವಣಾಧಿಕಾರಿಗಳು ಪ್ರಕಟಿಸಿರುವ ಅರ್ಹ ಮತದಾರರ, ಸುಸ್ತಿದಾರರ ಮತ್ತು ಅನರ್ಹ ಮತದಾರರ ಕರಡು ಪಟ್ಟಿಗಳನ್ನು ಆಕ್ಷೇಪಣೆ ಆಹ್ವಾನಿಸುತ್ತಿರುವ ಕುರಿತು.**

**ಉಲ್ಲೇಖ : ಮಾನ್ಯ ಚುನಾವಣಾಧಿಕಾರಿಗಳು ದಿನಾಂಕ 07 ಅಕ್ಟೋಬರ್ 2016ರಂದು ಪ್ರಕಟಿಸಿರುವ ಅಧಿಕೃತ ಜ್ಞಾಪನದ ಸಂಖ್ಯೆ:ಚುನಾವಣೆ ವಿವ/42/2015–16.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 07 ಅಕ್ಟೋಬರ್ 2016ರಂದು ಸಂಯುಕ್ತ ಸಹಕಾರಿಗೆ ಸಲ್ಲಿಕೆಯಾಗಿರುವ ಉಲ್ಲೇಖದ ಪತ್ರದ ಮೂಲಕ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಚುನಾವಣೆಗೆ ಮಾನ್ಯ ಚುನಾವಣಾಧಿಕಾರಿಗಳು ಆದೇಶ/ಅಧಿಕೃತ ಜ್ಞಾಪನವನ್ನು ಪ್ರಕಟಿಸಿರುತ್ತಾರೆ. ಈ ಆದೇಶ/ಅಧಿಕೃತ ಜ್ಞಾಪನದ ಜೊತೆ ಅರ್ಹ ಮತದಾರರ, ಸುಸ್ತಿದಾರರ ಮತ್ತು ಅನರ್ಹ ಮತದಾರರ ಕರಡು ಪಟ್ಟಿಗಳನ್ನು ಪ್ರಕಟಿಸಿರುತ್ತಾರೆ. ಆದೇಶ/ಅಧಿಕೃತ ಜ್ಞಾಪನದಲ್ಲಿ ಈ ಪಟ್ಟಿಗಳಿಗೆ ಸಹಕಾರಿಯ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಆದೇಶ/ಅಧಿಕೃತ ಜ್ಞಾಪನದ 30 ದಿನಗಳ ಒಳಗಾಗಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ/ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ವ್ಯವಸ್ಥಾಪಕ ನಿರ್ದೇಶಕರಿಗೆ ನೇರವಾಗಿ ತಮ್ಮ ನಿರ್ದಿಷ್ಠ ಆಕ್ಷೇಪಣೆಗಳನ್ನು ಅಗತ್ಯ ಪೂರಕ ದಾಖಲೆಗಳೊಂದಿಗೆ ಸಲ್ಲಿಸಲು ಸೂಚಿಸಿರುತ್ತಾರೆ. ಈ ಪತ್ರದೊಂದಿಗೆ ತಮ್ಮ ವಿಭಾಗಕ್ಕೆ ಸಂಬಂಧಿಸಿದ ಪಟ್ಟಿಗಳನ್ನು ಲಗತ್ತಿಸಿದೆ. ಈ ಪಟ್ಟಿಗಳನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ, ಎಲ್ಲಾ ವಿಭಾಗೀಯ ಕಛೇರಿಗಳ, ಮಾನ್ಯ ನಿಬಂಧಕರ ಕಛೇರಿಯ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದ ಸೂಚನಾ ಫಲಕಗಳಲ್ಲಿ ಹಾಗೂ ಸಂಯುಕ್ತ ಸಹಕಾರಿಯ ಅಂತರ್ಜಾಲ www.souharda.coop ದಲ್ಲಿ ಪ್ರಕಟಿಸಲಾಗಿರುತ್ತದೆ.

**ಈ ಮೇಲಿನ ಪಟ್ಟಿಗಳು 12 ಮೇ 2016ರ ದಿನಾಂಕದಂತೆ ಇರುವ ಪಟ್ಟಿಯಾಗಿರುತ್ತದೆ. ಮೇಲಿನ ಪಟ್ಟಿಯಲ್ಲಿರುವ ಅರ್ಹ ಮತದಾರ ಸಹಕಾರಿಗಳು 2015–16ನೇ ಸಾಲಿನ ಶಿಕ್ಷಣ ನಿಧಿಯನ್ನು ಮತ್ತು 2016–17ನೇ ಸಾಲಿನ ವಾರ್ಷಿಕ ಶುಲ್ಕವನ್ನು ನವಂಬರ್ 07, 2016ರೊಳಗೆ ಪಾವತಿಸಿದಲ್ಲಿ ಅಂತಿಮ ಅರ್ಹ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳ್ಳುತ್ತಾರೆ. ಸುಸ್ತಿದಾರ ಸಹಕಾರಿಗಳು ಹಿಂದಿನ ಎಲ್ಲಾ ವರ್ಷಗಳ ಮತ್ತು ಪ್ರಸಕ್ತ ಸಾಲಿನ ಬಾಕಿ ಮೊತ್ತವನ್ನು ಪಾವತಿಸಿದಲ್ಲಿ ಅರ್ಹ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳ್ಳುತ್ತಾರೆ.**

ಸಹಕಾರಿಯಿಂದ ಸಂಯುಕ್ತ ಸಹಕಾರಿಗೆ ಡೆಲಿಗೇಟ್ ಆಗುವವರ ಹೆಸರನ್ನು ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ನಿರ್ಣಯಿಸಿ ಚುನಾವಣಾ ಪ್ರಾಧಿಕಾರದಿಂದ ಪೂರೈಸಲಾಗುವ (ಚುನಾವಣಾ ಪ್ರಾಧಿಕಾರದಿಂದ ಸಂಯುಕ್ತ ಸಹಕಾರಿಗೆ ಡೆಲಿಗೇಟ್ ನಮೂನೆ ಪೂರೈಕೆಯಾದ ನಂತರ ಸದಸ್ಯ ಸಹಕಾರಿಗಳಿಗೆ ಕಳುಹಿಸಲಾಗುವುದು) ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ, ದಿನಾಂಕ 07 ನವಂಬರ್ 2016ರ ಒಳಗಾಗಿ ಕಳುಹಿಸಲು ಸೂಚಿಸಿದೆ. ಈ ಹಿನ್ನೆಲೆಯಲ್ಲಿ ದಿನಾಂಕ 07 ಅಕ್ಟೋಬರ್ 2016ರ ನಂತರ ಆಡಳಿತ ಮಂಡಲಿ ಸಭೆಯನ್ನು ನಡೆಸಿ ಆಡಳಿತ ಮಂಡಲಿ ಸಭೆಯಲ್ಲಿ ಡೆಲಿಗೇಟ್ ಆಯ್ಕೆಯ ಕುರಿತು ನಿರ್ಣಯವನ್ನು ಸ್ವೀಕರಿಸಬೇಕಿರುತ್ತದೆ. ಈ ನಿರ್ಣಯವನ್ನು ಯಥಾವತ್ತಾಗಿ ಆಡಳಿತ ಮಂಡಲಿ ಸಭೆಗೋಸ್ಕರ ಮೀಸಲಿಟ್ಟಿರುವ ಪುಸ್ತಕದಲ್ಲಿ ಯಥಾವತ್ತಾಗಿ ದಾಖಲು ಮಾಡಬೇಕಿರುತ್ತದೆ. ಆಡಳಿತ ಮಂಡಲಿ ಸಭೆಯ ಪುಸ್ತಕದಲ್ಲಿ ಹಾಜರಿರುವ ಮತ್ತು ಗೈರುಹಾಜರಾಗಿರುವ ಎಲ್ಲಾ ನಿರ್ದೇಶಕರ ಸಂಖ್ಯೆಯನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಎಲ್ಲಾ ಸಹಕಾರಿಗಳಿಗೂ ಸಹ ಡೆಲಿಗೇಟ್ ನಮೂನೆಯನ್ನು ಭರ್ತಿ ಮಾಡಲು ಅನುಕೂಲವಾಗುವಂತೆ ಮಾದರಿ ಡೆಲಿಗೇಟ್ ನಮೂನೆಯನ್ನು ಪೂರೈಸಲಾಗುವುದು ಮತ್ತು ಸಂಯುಕ್ತ ಸಹಕಾರಿಯ ಅಂತರ್ಜಾಲ www.souharda.coop ದಲ್ಲಿ ಪ್ರಕಟಿಸಲಾಗುವುದು.

ವಂದನೆಗಳೊಂದಿಗೆ,

ಸಹಿ/–

(ಶರಣಗೌಡ ಜಿ. ಪಾಟೀಲ)

ವ್ಯವಸ್ಥಾಪಕ ನಿರ್ದೇಶಕ